


- ನೀರಿನ ಸಂರಕ್ಷಣೆಗಾಗಿ ನಾವೆಲ್ಲ ನಮ್ಮ ಮನೆಗಳಲ್ಲಿ ಕೆಲವು ಕ್ರಮಗಳನ್ನು ಅನುಸರಿಸಬಹುದು. ಬೇಸಿಗೆ ದಿನಗಳಲ್ಲಿ ನಾವು ಮರೆಯಬಾರದ ಕೆಲವು ಸಂಗತಿಗಳು:
- ತುಂತುರು ಸ್ನಾನ ಕನಿಷ್ಠ ಅವಧಿಯದಿರಲಿ.
- ಉಪಯೋಗಿಸದಿದ್ದಾಗ ಕೊಳಾಯಿ ಬಂದ್ ಮಾಡಿ.
- ಪೂರ್ಣ ಭರ್ತಿಯಿದ್ದಾಗ ಮಾತ್ರ ವಾಷಿಂಗ್ ಮೆಶಿನ್, ಡಿಶ್ ವಾಷರ್ ಚಾಲೂ ಮಾಡಿ.
- ಲಾನ್, ಗಿಡಗಳಿಗೆ ಬೆಳಗ್ಗೆ ಅಥವಾ ಸಂಜೆ ನೀರು ಹಾಯಿಸುವುದರಿಂದ ಆವಿಯಾಗುವ ಪ್ರಮಾಣ ತಗ್ಗಿ ನೀರನ್ನು ಮಿಗಿಸಬಹುದು.
- ವಾಹನಗಳನ್ನು ನೀರಿನಿಂದ ತೊಳೆಯುವ ಬದಲಿಗೆ ಒದ್ದೆ ಬಟ್ಟೆಯಿಂದ ಒರೆಸಿ.
- ಬೇಸಿಗೆ ಕಾಲದಲ್ಲಿ ಮನೆ, ಮಳಿಗೆಯ ಹೊರಗಡೆ ಪ್ರಾಣಿಪಕ್ಷಿಗಳ ಸೇವನೆಗೆಂದು ತೊಟ್ಟಿ, ತೆರೆದ ಮಡಕೆಯಲ್ಲಿ ನೀರಿಡಿ.
- ಮನೆಗೆ ಬರುವ ಬಂಧುಮಿತ್ರರಿಗೆ ನೀರಿತ್ತು ಉಪಚರಿಸಿ.
- ಮನೆಯಿಂದ ಹೊರಡುವಾಗ ಒಂದೆರಡು ಬಾಟಲ್ ನೀರು ತಪ್ಪದೇ ಒಯ್ಯಿರಿ.

ನೀರಿನ ದ್ರವ್ಯರಾಶಿ 1 ಗ್ರಾಂ. ಮಂಜುಗಡ್ಡೆಯ ಸಾಂದ್ರತೆ 1ಕ್ಕಿಂತ ಕಡಿಮೆಯಾದ್ದರಿಂದ ಅದು ನೀರಿನಲ್ಲಿ ತೇಲುವುದು. ಘನ, ದ್ರವ, ಮತ್ತು ಅನಿಲ – ಈ ಮೂರೂ ರೂಪಗಳಲ್ಲೂ ನೈಸರ್ಗಿಕವಾಗಿ ದೊರೆಯುವ ಏಕೈಕ ವಸ್ತುವೆಂದರೆ ಅದು ನೀರು. ನೀರಿನ ಒಂದೊಂದು ಹನಿಯೂ ಒಂದು ಕಥೆ ಹೇಳುತ್ತದೆ. ನಾವು ಉಳಿಸುವ ಒಂದೊಂದು ಹನಿ ನೀರೂ ನಮ್ಮ ಭೂಗ್ರಹದ ಮತ್ತು ಮುಂದಿನ ಪೀಳಿಗೆಯ ವಿಜಯ.

ಜಲಜನಕ ಮತ್ತು ಆಮ್ಲಜನಕ ಅನಿಲಗಳನ್ನು ಗೊತ್ತಾದ ಪ್ರಮಾಣದಲ್ಲಿ ಬೆರೆಸಿದಾಕ್ಷಣಕ್ಕೆ ನೀರು ಸಿದ್ಧ ಎಂದಲ್ಲ. ಅವು ಬೆರೆಯಲು ಅಗಾಧ ಶಕ್ತಿ ಅಗತ್ಯ. ಅದೋ ಧಗದಹಿಸುವ ಜಲಜನಕ ಹಾಗೂ ಆಮ್ಲಜನಕದ ಭಾರೀ ಸ್ಫೋಟವನ್ನೊಳಗೊಂಡ ದೊಡ್ಡಮಟ್ಟದ ರಾಸಾಯನಿಕ ಕ್ರಿಯೆ. ಇದು ಅತಿ ಅಪಾಯಕಾರಿ ಪ್ರಯತ್ನ. ಸರಿ, ಮತ್ತೆ ಯಾವುದಾದರೂ ನೀರಿನ ಉತ್ಪಾದನಾ ವಿಧಾನ ಉಂಟೆ? ಗಾಳಿಯಿಂದ ನೇರವಾಗಿ ನೀರನ್ನು ಪಡೆಯುವ ಪ್ರಯತ್ನಗಳಾಗಿವೆ. ಅದೂ ಸಹ ಕಠಿಣ. ನಮಗೆ ಒಂದು ಹನಿ ನೀರನ್ನೂ ತಯಾರಿಸಲಾಗದು. ನೀರಿಗಾಗಿ ಅನ್ಯ ಆಕಾಶಕಾಯಗಳತ್ತ ದೃಷ್ಟಿ ಸದ್ಯಕ್ಕಂತೂ ಆಗದ ಮಾತು. ಹಾಗಾಗಿ, ಪ್ರಕೃತಿದತ್ತವಾಗಿರುವ ನೀರನ್ನು ಹಿತಮಿತವಾಗಿ ಬಳಸುವುದೇ ಜಾಣತನ. ಎರಡು ಜಲಜನಕದ ಪರಮಾಣುಗಳು ಮತ್ತು ಒಂದು ಆಮ್ಲಜನಕದ ಪರಮಾಣು ಸೇರಿದರೆ ನೀರಿನ ಒಂದು ಅಣು ಎನ್ನುವುದು ವಿಜ್ಞಾನ ಪಾಠ ಸರಿಯೆ. ಆದರೆ ಪ್ರಾಯೋಗಿಕವಾಗಿ?



ನೀರನ್ನು ಮರುಬಳಸಬಹುದು. ಹಾಗೆಂದ ಮಾತ್ರಕ್ಕೆ ಅದು ಅಕ್ಷಯ, ಅನಂತ ಎಂದಲ್ಲ. ಜನಸಂಖ್ಯೆ ಹೆಚ್ಚುತ್ತಿದೆ, ತಾಪಮಾನ ಏರುತ್ತಿದೆ. ಮಳೆಯನ್ನೇ ಅವಲಂಬಿಸಲಾಗದು. ನೀರಿನ ಸಂರಕ್ಷಣೆಗೆ ಜಗತ್ತಿನ ಪ್ರತಿಯೊಬ್ಬ ಪ್ರಜೆಯೂ ಪಣ ತೊಡಗಬೇಕು.

ನಾವು ಅಲ್ಪಸ್ವಲ್ಪ ನೀರಿನ ಉಳಿತಾಯ ಮಾಡಿದರೂ ಸಾಕು, ಅದರಿಂದ ಆಗುವ ಸುಧಾರಣೆ ಬಹು ದೊಡ್ಡದು. ನೀರಿನ ಸಂರಕ್ಷಣೆಯೆಂದರೆ ಅದನ್ನು ಬಳಸಲೇಬಾರದೆಂದಲ್ಲ, ಅನಗತ್ಯ ಪೋಲನ್ನು ತಡೆಯುವುದು ಎಂದು. ಮಳೆ ನೀರಿನ ಕೊಯಿಲು, ಸೋರಿಕೆ ನಿವಾರಣೆ ಬಹು ಪರಿಣಾಮಕಾರಿ ಹೆಜ್ಜೆಗಳು. ತಂಪಾದ, ಆದರೆ ತೇವವಿಲ್ಲದ ಜಾಗದಲ್ಲಿ ನೀರನ್ನು ಶೇಖರಿಸಿಡಬೇಕು. ನೀರನ್ನು ವಿಷ ವಸ್ತುಗಳು ಬೆರೆಯದಂತೆ ನಿಗಾ ವಹಿಸುವುದು ಅಷ್ಟೇ ಮುಖ್ಯ.

ನೀರಿನ ಸಾಂದ್ರತೆ ಹೆಚ್ಚು ಎಂದ ಮೇಲೆ ಮೇಲ್ಮುಖ ಒತ್ತಡವೂ ಹೆಚ್ಚು. ಮೀನಿನಂಥ ಜೀವಿಗಳು ಅನಾಯಾಸವಾಗಿ ತೇಲಲು, ಈಜಲು ಇದೇ ಕಾರಣ. ಜೊತೆಗೆ ತಾಪದ ಏರಿಳಿತಗಳನ್ನು ನೀರು ತಾನೇ ಸಹಿಸಿಕೊಂಡು ಅವನ್ನು ರಕ್ಷಿಸುತ್ತದೆ. ಕೊಳ, ಸರೋವರಗಳಲ್ಲಿ ನೀರು ಮಂಜುಗಡ್ಡೆಯಾಗುವುದು ಸರಿ. ಆದರೆ ಮೇಲ್ಮೈನಿಂದ ಶುರುವಾಗಿ ನಂತರ ತಳಭಾಗದ ತನಕ ಮಂಜುಗಡ್ಡೆಯಾಗುವ ಪ್ರಕ್ರಿಯೆ ನಿಜಕ್ಕೂ ಪ್ರಕೃತಿಯ ಅದ್ಭುತ. ಮೇಲ್ಮೈನಲ್ಲಿ ಮಂಜಿನ ಹೊದಿಕೆ ನಿರೋಧಕ ಅಥವಾ ಕವಚದಂತೆ ವರ್ತಿಸಿ ಜೀವಿಗಳನ್ನು ನಿರಾಂತಕಗೊಳಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in